(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಇಲ್ಲಿ ಹಿರಿಯ ಸಚಿವರು ಇದ್ದಾರೆ. ಎಲ್ಲರೂ ಇಲ್ಲಿ ಇಲ್ಲ ಅಷ್ಟೆ. ಅಲ್ಲಿ ಕೌನ್ಸಿಲ್ ನಲ್ಲಿ ಇರುತ್ತಾರೆ. ಇದು ತಮಗೂ ಗೊತ್ತಿರುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, 2003–04ರ ಸಾಲಿಗೆ ಹಣ ಬಿಡುಗಡೆಯಾಗಿದೆ ಎನ್ನತಕ್ಕಂಥ ಮಾಹಿತಿ ನನಗಿದೆ. ಅಕಸ್ಮಾತ್ ನಿಮ್ಮ ಕ್ಷೇತ್ರಗಳಿಗೆ ಅಥವಾ ಬೇರೆ ಕ್ಷೇತ್ರಗಳಿಗೆ ಹಣ ಹೋಗಿಲ್ಲ ಎನ್ನತಕ್ಕಂಥದ್ದು ಇದ್ದರೆ ಮಾನ್ಯ ವಸತಿ ಮಂತ್ರಿಗಳೂ ಬಂದ ಕೂಡಲೇ ಸಾಯಂಕಾಲ ಯಾವ ಯಾವ ಕ್ಷೇತ್ರಗಳಿಗೆ ಹಣ ಬಿಡುಗಡೆಯಾಗಿದೆ ಎಂದು ತಮಗೆ ಉತ್ತರವನ್ನು ಸಹ ಕೊಡುತ್ತಾರೆ ಮತ್ತು ನೀವು ಹೇಳಿದಂಥ ರೀತಿಯಲ್ಲಿ ಸರ್ಕಾರ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ): ಮಾನ್ಯ ಉಪಾಧ್ಯಕ್ಷರೆ, ಈಗ ಬಿಪಿಎಲ್ ಕಾರ್ಡ್ ಬಗ್ಗೆ ಸರಿಯಾದ ರೀತಿಯ ಸಮೀಕ್ಷೆ ನಡೆದಿಲ್ಲ. ನನ್ನ ಕ್ಷೇತ್ರದಲ್ಲಿ ತೋಟ ಕಾರ್ಮಿಕರಿಗೆ ಸರಿಯಾದ ರೀತಿಯಲ್ಲಿ ಬಿಪಿಎಲ್. ಕಾರ್ಡ್ ವಿತರಣೆಯಾಗಿಲ್ಲ. ಅಷ್ಟಲ್ಲದೆ, ನಾವು ಗಮನಿಸಿದ ರೀತಿಯಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಕೇಂದ್ರ ಸರ್ಕಾರ 500 ರೂಪಾಯಿಗಳಿಗೆ ಟೆಲಿಫೋನ್ ಕೊಟ್ಟಿದೆ. ಮತ್ತು ಒಂದು ರೂಪಾಯಿಗೆ ಸಹ ಟೆಲಿಫೋನ್ ಕೊಟ್ಟಿದೆ. ಹಾಗಾಗಿ ಕಡು ಬಡವರು ಫೋನ್ ತೆಗೆದುಕೊಳ್ಳುವಂಥ ಒಂದು ಅವಕಾಶ ಸಿಕ್ಕಿ ಅದರಂತೆ ಫೋನ್ ತೆಗೆದುಕೊಂಡರು. ಇನ್ನು ಮುಂದೆಯೂ ಸಹ ಅಂಥ ಅವಕಾಶಗಳನ್ನು ಸರ್ಕಾರ ಕೊಡಬಹುದು. ಅವಾಗ ಫೋನನ್ನು ತೆಗೆದುಕೊಳ್ಳಬೇಕೋ ಅಥವಾ ಬೇಡವೋ ಎನ್ನುವ ಒಂದು ಪ್ರಶ್ನೆ ಬಂದಿದೆ. ಏಕೆಂದರೆ ಒಂದು ರೂಪಾಯಿ ಕಾಯಿನ್ ಕಟ್ಟಿದವರಿಗೂ ಕೂಡ ನಿಮ್ಮ ಬಿಲ್ ಗಳನ್ನು ಪಾವತಿ ಮಾಡಿ ಈಗ ತೆಗೆದುಕೊಳ್ಳಿ ಎಂದು ಹೇಳಿದರು. ಇದರಿಂದಾಗಿ ಕಡು ಬಡವರು ಸಹ ಫೋನ್ ತೆಗೆದುಕೊಳ್ಳುವುದಕ್ಕೆ ಅವಕಾಶವಾಗಿತ್ತು. ದಯಮಾಡಿ ಫೋನ್ ಇಟ್ಟುಕೊಂಡವರಿಗೂ ಕೂಡ ಬಿಪಿಎಲ್ ಪಟ್ಟಿಯಲ್ಲಿ ಕೊಡಬೇಕೆನ್ನುವುದನ್ನು ಸರ್ಕಾರ ಅವಕಾಶ ಮಾಡಿಕೊಡಬೇಕು. ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ. ಕಾಫಿ ತೋಟದಲ್ಲಿ ಕಾರ್ಮಿಕರ ಕೊರತೆ ಬಂದಿದೆ ಎಂದು ಬಂದಿದೆ ಏಕೆಂದರೆ, ಬಿಪಿಎಲ್ ಕಾರ್ಡ್ ಸಿಗಲಿಲ್ಲವೆಂದು ಎಲ್ಲ ಕಾಮಿಕರೂ ಕೆಲಸ ಬಿಟ್ಟು ಬರುತ್ತಿದ್ದಾರೆ. ಹೀಗಾಗಿ, ಅವರ ಹೊಟ್ಟೆ ಮೇಲೆ ಹೊಡೆಯುವುದು ಬೇಡ. ದಯಮಾಡಿ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಿ, ಈಗೇನು ಟೆಲಿಫೋನ್ ಇದ್ದವರಿಗೆ ಇಲ್ಲವೆಂದು ಇದೆಯಲ್ಲ ಆ ನೀತಿಯನ್ನು ಸಡಿಲಿಸಬೇಕು. ಮತ್ತೆ, ತೋಟ ಕಾರ್ಮಿಕರಿಗೆ ಕಡ್ಡಾಯವಾಗಿ ಬಿಪಿಎಲ್ ಕಾರ್ಡ್ ಅನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ.

ಶ್ರೀ ಸಿ.ಟಿ.ರವಿ:– ತೋಟ ಕಾರ್ಮಿಕರಿಗೆ ಕೊಡುತ್ತೇವೆಂದು ಹೇಳಿ ಸನ್ಮಾನ್ಯ ಸಚಿವರು ಸದನದಲ್ಲೂ ಹೇಳಿಕೆ ಕೊಟ್ಟಿದ್ದರು. ಚಿಕ್ಕಮಗಳೂರಿಗೂ ಬಂದಾಗಲೂ ಕೂಡ ಹೇಳಿಕೆ ಕೊಟ್ಟಿದ್ದರು. ಆದರೆ, ಸರ್ಕಾರಿ ಆದೇಶ ಇವತ್ತಿನವರೆಗೂ ತಲುಪಲಿಲ್ಲ. ತೋಟ ಕಾರ್ಮಿಕರನ್ನು ಬಿಪಿಎಲ್ ವ್ಯಾಪ್ತಿಗೆ ಸೇರಿಸುತ್ತೀರೋ? ಇಲ್ಲವೋ? ಎಂಬ ಬಗ್ಗೆ ಸನ್ಮಾನ್ಯ ಅಧ್ಯಕ್ಷರೆ ನಮಗೆ ಉತ್ತರ ಕೊಡಿಸಬೇಕು.

ಶ್ರೀ ಡಿ.ಎನ್. ಜೀವರಾಜ್: ಆ ತೋಟ ಕಾರ್ಮಿಕರವನ್ನು ಯಾವುದೇ ಕಾರಣಕ್ಕೂ ಸೇರಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ):– ಮಾನ್ಯ ಉಪಾಧ್ಯಕ್ಷರೆ,

ಕರ್ನಾಟಕ ವಿಧಾನಸಭಾ ಸದಸ್ಯರಾದ ಶ್ರೀ ಎಂ.ಪಿ. ಕುಮಾರಸ್ವಾಮಿರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಹೇಳಿಕೆ.

ವಿಷಯ: ಸರ್ಕಾರ ಬಿಪಿಎಲ್ ಕಾರ್ಡ್ ನೀಡುವಾಗ ಅನುಸರಿಸುವ ಕೆಲವೊಂದು ನಿಯಮ–ಗಳು ಅವೈಜ್ಞಾನಿಕವಾಗಿವೆ. ದೂರಸಂಪರ್ಕ ಇಲಾಖೆಯವರು ಕೆಲವು ದಿನಗಳ ಹಿಂದೆ 1. ರೂ. ಡಿಪಾಸಿಟ್ ಕಟ್ಟಿದರೆ ಟೆಲಿಫೋನ್ ಸಂಪರ್ಕ ನೀಡಿರುತ್ತಾರೆ. ಅಷ್ಟೇ ಅಲ್ಲದೇ ದೀಪಾವಳಿ ಹಬ್ಬದ ಕೊಡುಗೆಯಾಗಿ 500 ರೂ. ಡಿಪಾಸಿಟ್ ಕಟ್ಟಿದವರಿಗೂ ಸಹ ಟೆಲಿಫೋನು ಸಂಪರ್ಕ ಕೊಟ್ಟಿರುತ್ತಾರೆ. ಆದರೆ ಸರ್ಕಾರವು ಅನುಸರಿಸುತ್ತಿರುವ ನೀತಿಯನ್ವಯ ದೂರಸಂಪರ್ಕ ಹೊಂದಿರುವವರಿಗೆ ಬಿಪಿಎಲ್ ಕಾರ್ಡ್ ನೀಡುತ್ತಿಲ್ಲ. ಇದರಿಂದ ಬಡವರಿಗೆ ತೊಂದರೆಯಾಗುತ್ತಿದೆ. ಇದೇ ರೀತಿ ತೋಟಗಾರಿಗೆ ಕಾರ್ಮಿಕರಿಗೂ ಸಹ ಬಿಪಿಎಲ್ ಕಾರ್ಡ್ ನೀಡುವಾಗ ಅನುಸರಿಸುತ್ತಿರುವ ಕೆಲವು ನೀತಿಗಳು ಸರಿಯಾಗಿರುವುದಿಲ್ಲ. ಸರ್ಕಾರ ಎಲ್ಲಾ ಕಾಯಂ ಕೂಲಿ ಕಾರ್ಮಿಕರಿಗೆ ಒಂದೇ ನೀತಿ ಅನುಸರಿಸಿ ಬಿಪಿಎಲ್ ಕಾರ್ಡ್‌ಗಳನ್ನು ವಿತರಣೆ ಮಾಡಬೇಕಾದ ಅವಶ್ಯಕತೆ ಇರುತ್ತದೆ. ಈ ಬಗ್ಗೆ ಇಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ನೀಡಬೇಕಾಗಿ ಕೋರುತ್ತೇನೆ.

ಉತ್ತರ: ಬಿಪಿಎಲ್ ಮತ್ತು ಎಪಿಎಲ್ ಫಲಾನುಭವಿಗಳನ್ನು ಗುರುತಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶದಲ್ಲಿ ರೂ. 12,000 ನಗರ ಪ್ರದೇಶದಲ್ಲಿ ರೂ. 17,000 ಕ್ಕಿಂತ ಕಡಿಮೆ ವಾರ್ಷಿಕ ಆದಾಯವಿರುವ ಕುಟುಂಬಗಳನ್ನು ಬಿಪಿಎಲ್ ಎಂದು ಗುರುತಿಸಿ ಬಿಪಿಎಲ್ ಪಡಿತರ ಚೀಟಿಗಳನ್ನು ನೀಡಲು ಪರಿಗಣಿಸಲಾಗುತ್ತಿದೆ. ಇದಲ್ಲದೆ

ಎರಡು ಹೆಕ್ಟೇರ್ ಖುಷ್ಕಿ ಜಮೀನು ಅಥವಾ ತತ್ಸಮಾನ ತರಿ ಅಥವಾ ಬಾಗಯಾತ್ ಜಮೀನು ಉಳ್ಳವರು, ಸೆಲ್ ಫೋನ್, ಟೆಲಿಫೋನ್, ಪೆಟ್ರೋಲ್ ಮತ್ತು ಡೀಸೆಲ್ ನಿಂದ ಚಲಿಸುವ 2/4 ಚಕ್ರದ ವಾಹನಗಳನ್ನು ಹೊಂದಿರುವ ಕುಟುಂಬದವರು ಮತ್ತು 1 ಲಕ್ಷ ರೂ. ಗಳು ಮೀರಿ ಬ್ಯಾಂಕ್ ನಲ್ಲಿ ಸಾಲ ಪಡೆದ ಕುಟುಂಬಗಳು, ಚಾಲನೆಯಲ್ಲಿರುವ ಒಂದು ಬೋರ್ ವೆಲ್ ಹೊಂದಿರುವ ಕುಟುಂಬಗಳು, ತಿಂಗಳಿಗೆ ರೂ. 1000/– ವೇತನವನ್ನು ಸರ್ಕಾರಿ/ಸರ್ಕಾರೇತರ/ ಖಾಸಗಿ ಸಂಸ್ಥೆಗಳಿಂದ ಪಡೆಯುತ್ತಿರುವ ಕುಟುಂಬಗಳು, ಕಾಂಟ್ರಕ್ಟ್ ದಾರರಾಗಿ ನೋಂದಾವಣಿ ಮಾಡ ಲ್ಪಟ್ಟವರು, ಎ.ಪಿ.ಎಂ.ಸಿ Trader ಮತ್ತು Commission agents ಬೀಜ/ ಗೊಬ್ಬರಗಳ ಟ್ರೇಡರ್ಸ್/ಡೀಲರ್ಸ್ ಇತ್ಯಾದಿ ಆಗಿರುವವರ ಬಿಪಿಎಲ್ ಪಡಿತರ ಚೀಟಿ ಯನ್ನು ಅನರ್ಹರೆಂದು ಪರಿಗಣಿಸಲಾಗುವುದು.

ಮೇಲ್ಕಂಡ ಮಾನದಂಡಗಳನ್ನು ಅನುಸರಿಸಿ ಸಮೀಕ್ಷಾ ಸಂದರ್ಭದಲ್ಲಿ ಅರ್ಹರನ್ನು ಗುರುತಿಸಿ ಬಿಪಿಎಲ್/ಎಪಿಎಲ್ ಎಂದು ವರ್ಗೀಕರಣ ಮಾಡಲಾಗುತ್ತಿದೆ ಸದರಿ ಪಟ್ಟಿಯನ್ನು ಗ್ರಾಮಸಭೆಗಳಲ್ಲಿ ಮಂಡಿಸಿ ಅನುಮೋದನೆಯನ್ನು ಸಹ ಪಡೆಯಲಾಗುತ್ತಿದೆ.

ಶ್ರೀ ಎಸ್.ಎಲ್. ಧರ್ಮೇಗೌಡ: ಬಿಪಿಎಲ್ ಕಾರ್ಡ್ ಕೊಡುವ ವಿಚಾರದಲ್ಲಿ ಕೆಲವು ಕಡೆ ಬೋರ್ ವೆಲ್ ಕೊರೆದಿದ್ದು, ಆ ಬೋರ್ ವೆಲ್ ಫೇಲ್ ಆಗಿರುವುದಕ್ಕೂ ಕಾರ್ಡ್ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ದಯವಿಟ್ಟು, ಅದಕ್ಕೂ ಅವಕಾಶ ಮಾಡಿಕೊಡುವಂಥ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳುತ್ತೇನೆ.

ಉಪಾಧ್ಯಕ್ಷರು: ಶಕುಂತಲಾ ಶೆಟ್ಟಿಯವರೆ ಮಾತನಾಡಿ.ನೀವು ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಕುಮಾರಸ್ವಾಮಿ:... ಬಿಪಿಎಲ್ ಕಾಡ್ ್ ಕೊಡಬಾರದು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು:– ಆಯಿತು, ಕುಮಾರಸ್ವಾಮಿಯವರೆ ಅವರು ಹೇಳಿದ್ದಾರೆ. ಕುಳಿತುಕೊಳ್ಳಿ.

ಶ್ರೀಮತಿ ಶಕುಂತಲಾ ಶೆಟ್ಟಿ ಟಿ. (ಪುತ್ತೂರು):– ನಮ್ಮ ಪುತ್ತೂರಿನಲ್ಲಿ ಸಬ್–ಡಿವಿಜನ್ ಲೆವೆಲ್ ನಲ್ಲಿ ವಾರ್ತಾ ಭವನ ಕಾರ್ಯನಿರ್ವಹಿಸುತ್ತಿತ್ತು. ಅದು ಅಲ್ಲಿಂದ ಜಿಲ್ಲಾ ಕೇಂದ್ರಕ್ಕೆ ವರ್ಗಾವಣೆಯಾಗುತ್ತಿದೆ ಎಂದು ಗೊತ್ತಾದ ತಕ್ಷಣ ನಾನು ಮಾನ್ಯ ಸಚಿವರಲ್ಲೂ ಹಾಗೂ ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲೂ, ಅದನ್ನು ಅಲ್ಲಿ ಉಳಿಸಿಕೊಡಬೇಕೆಂದು ಕೇಳಿಕೊಂಡಿದ್ದೆ. ಅದು ಬೆಳ್ತಂಗಡಿ, ಪುತ್ತೂರು, ಸುಳ್ಯ, ಬಂಟ್ವಾಳ ತಾಲ್ಲೂಕುಗಳ ಕೇಂದ್ರವಾಗಿ ಕೆಲಸ ನಿರ್ವಹಣೆ ಮಾಡುತ್ತಿತ್ತು. ಮಾನ್ಯ